0103/0522

## I Semester 3 Year LL.B./V Semester 5 Year B.A. LL.B./B.B.A. LL.B. Examination, June/July 2017
## LAW OF TORTS AND CONSUMER PROTECTION ACT
## (Old Batch)

Duration : 3 Hours | Max. Marks : 100

**Instructions**: 1. Answer Question No. **9** and **any five** of the remaining.
2. Question No. **9** carries **20** marks and the remaining carry **16** marks **each**.
3. Answer should be written either in **English** or in **Kannada**.

**ಸೂಚನೆಗಳು**: 1. ಪ್ರಶ್ನೆ **9** ಮತ್ತು ಉಳಿದ ಯಾವುದಾದರೂ **ಐದಕ್ಕೆ** ಉತ್ತರಿಸಿ.
2. ಪ್ರಶ್ನೆ **9**ಕ್ಕೆ **20** ಅಂಕಗಳು ಮತ್ತು ಉಳಿದವಕ್ಕೆ ತಲಾ **16** ಅಂಕಗಳು.
3. ಉತ್ತರಗಳನ್ನು ಸಂಪೂರ್ಣವಾಗಿ **ಕನ್ನಡ** ಅಥವಾ **ಇಂಗ್ಲೀಷ್‌ನಲ್ಲಿಯೇ** ಬರೆಯಬೇಕು.

Q. No. 1. Explain the maxim 'damning sine injuria' and 'injuria sine damning' with the help of decided cases. Marks : 16
'ಕ್ಷತಿ ಇಲ್ಲದ ಹಾನಿ' ಮತ್ತು 'ಹಾನಿ ಇಲ್ಲದ ಕ್ಷತಿ' ಎಂಬ ತತ್ವಗಳನ್ನು ನಿರ್ಣಾಯಿತ ಪ್ರಕರಣಗಳ ಸಹಾಯದೊಂದಿಗೆ ವಿವರಿಸಿ.

Q. No. 2. Discuss the defences available in an action for tort of defamation. Marks : 16
ಮಾನಹಾನಿಯ ಅಪಕೃತ್ಯಕ್ಕೆ ಲಭ್ಯವಿರುವ ಪ್ರತಿರಕ್ಷೆಗಳನ್ನು ವಿವರಿಸಿ.

Q. No. 3. What is contributory negligence ? Explain it with the help of decided cases. Marks : 16
'ಸಹಾಯಕಾರಿ ನಿರ್ಲಕ್ಷ್ಯ' ಎಂದರೇನು ? ನಿರ್ಧರಿತ ಪ್ರಕರಣಗಳ ಸಹಾಯದೊಂದಿಗೆ ವಿವರಿಸಿ.

Q. No. 4. Narrate the various remedies available in an action for tort. Marks : 16
ಅಪಕೃತ್ಯಕ್ಕೆ ಲಭ್ಯವಿರುವ ವಿವಿಧ ಪರಿಹಾರಗಳನ್ನು ವಿವರಿಸಿ.

Q. No. 5. What is strict liability ? Describe the justifications for strict liability. Marks : 16
'ಕಠಿಣ ಹೊಣೆಗಾರಿಕೆ ಎಂದರೇನು ? ಕಠಿಣ ಹೊಣೆಗಾರಿಕೆಗೆ ಇರುವ ಸಮರ್ಥನೆಗಳನ್ನು ವಿವರಿಸಿ.

Q. No. 6. What is vicarious liability ? Under what circumstances vicarious liability arises ? Explain. Marks : 16
'ಬದಲಿ ಹೊಣೆಗಾರಿಕೆ' ಎಂದರೇನು ? ಯಾವ ಯಾವ ಸಂದರ್ಭಗಳಲ್ಲಿ ಈ ಹೊಣೆಗಾರಿಕೆಯು ಉಂಟಾಗುತ್ತದೆ ? ವಿವರಿಸಿ.

P.T.O.

Q. No. 7. State the composition and jurisdiction of district consumer forum. Marks : 16
ಜಿಲ್ಲಾ ಗ್ರಾಹಕ ವೇದಿಕೆಯ ರಚನೆ ಮತ್ತು ಇದರ ಅಧಿಕಾರ ವ್ಯಾಪ್ತಿಯನ್ನು ತಿಳಿಸಿ.

Q. No. 8. Write short notes on **any two** of the following : Marks : 8×2=16
ಕೆಳಕಂಡವುಗಳಲ್ಲಿ ಯಾವುದಾದರೂ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Vis-major : ದೈವೀ ಕೃತ್ಯ.

(b) Prudent man : ಪರಿಜ್ಞಾನ ಉಳ್ಳ ವ್ಯಕ್ತಿ.

(c) Volenti non fit injuria : ವಾಲ್ಂಟಿ ನಾನ್ ಫಿಟ್ ಇಂಜುರಿಯಾ.

Q. No. 9. Decide **any two** of the following : Marks :10×2=20

(a) Mr. B was beating two fighting dogs in order to separate them. Mr. X was watching them and was standing behind Mr. B while doing so, Mr. B accidentally hit the eye of Mr. X and caused severe injury. Can Mr. X claim compensation from Mr. B ?

'ಬಿ'ಯು ಜಗಳ ಆಡುತ್ತಿರುವ ಎರಡು ನಾಯಿಗಳನ್ನು ಬೇರ್ಪಡಿಸಬೇಕೆಂದು ಕೋಲಿಂದ ಅವುಗಳಿಗೆ ಹೊಡೆಯುತ್ತಿದ್ದನು. 'ಎಕ್ಸ್'ನು 'ಬಿ'ಯ ಹಿಂದೆ ನಿಂತು ಅದನ್ನು ನೋಡುತ್ತಿದ್ದನು. ಹೀಗೆ ಕೋಲೆತ್ತಿ ಹೊಡೆಯುವಾಗ, ಆಕಸ್ಮಿಕವಾಗಿ 'ಬಿ'ಯ ಕೈಯಲ್ಲಿದ್ದ ಕೋಲು 'ಎಕ್ಸ್'ನ ಕಣ್ಣಿಗೆ ತಾಗಿ ತೀವ್ರವಾದ ಗಾಯ ಉಂಟಾಯಿತು. 'ಎಕ್ಸ್'ನು 'ಬಿ'ಯಿಂದ ಪರಿಹಾರ ಪಡೆಯಬಹುದೇ ?

(b) Sudarshan, the chairman of a company was threatened by Suresh and Mahesh. It was in a letter which was drafted by them with the help of two clerks who wrote and typed the letter. Sudarshan sues Suresh and Mahesh for defamation. Can Sudarshan win the case ?

ಒಂದು ಕಂಪನಿಯ ಅಧ್ಯಕ್ಷನಾಗಿರುವ ಸುದರ್ಶನ್‌ರಿಗೆ, ಸುರೇಶ ಮತ್ತು ಮಹೇಶ ಎಂಬುವವರಿಬ್ಬರು ಬೆದರಿಕೆ ಹಾಕುತ್ತಾರೆ. ಅದು ಒಂದು ಪತ್ರದಲ್ಲಿದ್ದು ಅದನ್ನು ಅವರ ಇಬ್ಬರು ಗುಮಾಸ್ತರ ಸಹಾಯದಿಂದ ಬರೆದು ಟೈಪ್ ಮಾಡಿಸಿರುತ್ತಾರೆ. ಸುದರ್ಶನ್‌ರವರು ಸುರೇಶ ಮಹೇಶರ ಮೇಲೆ ಮಾನಹಾನಿಯ ದಾವೆ ಹೂಡುತ್ತಾರೆ. ಸುದರ್ಶನ್ ಈ ದಾವೆಯನ್ನು ಗೆಲ್ಲಬಹುದೇ ?

(c) A lady entered a hotel and sat below the Ceiling fan. She ordered food and while eating, ceiling fan falls on her. The lady filed a suit against owner for injuries caused to her. Can she succeed ?

ಓರ್ವ ಮಹಿಳೆ ಹೋಟೆಲ್ ಒಂದಕ್ಕೆ ಪ್ರವೇಶಿಸಿ ಸೀಲಿಂಗ್ ಫ್ಯಾನ್ ಕೆಳಗೆ ಕುಳಿತು ಕೊಳ್ಳುತ್ತಾಳೆ. ಅವಳು ಆಹಾರವನ್ನು ತರಲು ಹೇಳುತ್ತಾಳೆ ಮತ್ತು ಆಹಾರವನ್ನು ತಿನ್ನುತ್ತಿರುವ ವೇಳೆ ಸೀಲಿಂಗ್ ಫ್ಯಾನ್ ಅವಳ ಮೇಲೆ ಬೀಳುತ್ತದೆ. ಗಾಯಗೊಂಡಿದ್ದಕ್ಕೆ ಅವಳು ಹೋಟೆಲ್ ಮಾಲೀಕನ ಮೇಲೆ ದಾವೆ ಹೂಡುತ್ತಾಳೆ. ಅವಳು ಗೆಲ್ಲುವಳೇ ?